**2 ನೇ ಅಪರ ನ್ಯಾಯಿಕ ದಂಡಾಧಿಕಾರಿ ಮತ್ತು ಜೆಎಂಎಫ್‌ಸಿ ನ್ಯಾಯಾಲಯ**
**ಮಾಗಡಿ**
**ಕ್ರಿಮಿನಲ್ ಪ್ರಕರಣ ಸಂಖ್ಯೆ 653/2019**
**ಚಾಸಾ- 02 / ಫ್ರಾಸಾ- 01**

| | |
|---|---|
| ಹೆಸರು | **ಸುನಿಲ್ ಕುಮಾರ್** |
| ತಂದೆಯ ಹೆಸರು | **ರವಿಕುಮಾರ್** |
| ವಯಸ್ಸು | **29** |
| ಉದ್ಯೋಗ | **ಖಾಸಗಿ ಕೆಲಸ** |
| ವಿಳಾಸ | **ಬೆಂಗಳೂರು** |

**ದಿನಾಂಕಃ 05-01-2024 ರಂದು ಸಾಕ್ಷಿಯನ್ನು ಕರೆಯಿಸಿ ಪ್ರಮಾಣ ವಚನ ಬೋಧಿಸಲಾಯಿತು.**

**ಮುಖ್ಯ ವಿಚಾರಣೆ- ಮಾನ್ಯ ಸರ್ಕಾರಿ ಸಹಾಯಕ ಅಭಿಯೋಜಕ ರವರಿಂದ-**

ಮೃತ ಇಂಫ್ಯಾಂಟ್ ಟೋನಿಯವರು ನನಗೆ ಗೊತ್ತು. ದಿ.08-10-2014 ರಂದು ನನ್ನ ಬರ್ಡೇ ಪಾರ್ಟಿಗೋಸ್ಕರ ನನ್ನ ಸ್ಕೂಲ್ ಮತ್ತು ಕಾಲೇಜ್ ಸ್ನೇಹಿತರ ಜೊತೆ ಮಾಗಡಿಯು ರೂಪೀಸ್ ಡಾಬಾಗೆ ಹೋಗಿರುತ್ತೇನೆ. ರಾತ್ರಿ ಮಳೆ ಬರುವ ಸಂಭವ ಇದ್ದ ಕಾರಣ ನಾವು ಆ ದಿನದಂದು ಡಾಬದಲ್ಲಿಯೇ ತಂಗಿದ್ದೇವು. ಮಾರನೇ ದಿನ ಬೆಳಗ್ಗೆ 11 ಗಂಟೆ ಸಮಯದಲ್ಲಿ ತಿಪ್ಪಗೊಂಡನಹಳ್ಳಿ ಡ್ಯಾಮ್ ಹತ್ತಿರ ಬರುವಾಗ ಎದುರುಗಡೆಯಿಂದ ಬರುತ್ತಿದ್ದ ಟಾಟೋ ಸುಮೋ ಅತಿವೇಗವಾಗಿ ಬಂದು ತಿರುವು ಇರುವ ಜಾಗದಲ್ಲಿ ನನ್ನ ಸ್ನೇಹಿತನಾದ ಟೋನಿಯವರ ಬೈಕಿಗೆ ಡಿಕ್ಕಿಪಡಿಸಿರುತ್ತದೆ. ಸದರಿ ಅಪಘಾತದಿಂದ ಬೈಕ್ ಸಮೇತ ಆಂಟೋನಿ ಮತ್ತು ಚಾಸಾ-1 ರವರು ಕೆಳಗೆ ಬಿದ್ದಿರುತ್ತಾರೆ. ಆಂಟೋನಿಯವರು ಸ್ಥಳದಲ್ಲಿಯೇ ಮೃತಪಟ್ಟಿರುತ್ತಾರೆ. ನಂತರ ನಾನು ಆಂಬುಲೆನ್ಸ್ ಮತ್ತು ಪೋಲಿಸರಿಗೆ ಕರೆ ಮಾಡಿರುತ್ತೇನೆ. ಚಾಸಾ1 ರವರನ್ನು ಸುಂಕಟದ ಕಟ್ಟೆಯಲ್ಲಿ ಇರುವ ಲಕ್ಷ್ಮಿ ಆಸ್ಪತ್ರೆಗೆ ದಾಖಲಿಸಲಾಯಿತು. ಆಂಟೋನಿ ಮೃತ ದೇಹವನ್ನು ಪೊಲೀ. ಠಾಣೆಗೆ ತೆಗೆದುಕೊಂಡು ಹೋಗಿ ನಂತರ ಅವರ ಮನೆಗೆ ತೆಗೆದುಕೊಂಡು ಹೋಗಲಾಗಿರುತ್ತದೆ.

ಪೋಲೀಸರು 11 ರಿಂದ 12 ಗಂಟೆ ಸಮಯದಲ್ಲಿ ಬಂದು ನಮ್ಮ ಎಲ್ಲರ ಹೆಸರನ್ನು ಕೇಳಿ ಸಹಿಯನ್ನು ಪಡೆದುಕೊಂಡಿರುತ್ತಾರೆ. ಈಗ ನನಗೆ ಒಂದು ದಾಖಲೆಯನ್ನು ತೋರಿಸಿದ್ದು, ಅದರಲ್ಲಿ ನನ್ನ ಸಹಿ ಇದೆ. ಸದರಿ ದಾಖಲೆಯು ಪಂಚನಾಮೆಯಾಗಿದೆ. ಪಂಚನಾಮೆಯನ್ನು ನಿಪಿ-1 ಎಂದು ಸಾಕ್ಷಿಯ ಸಹಿಯನ್ನು ನಿಪಿ-1(ಎ) ಎಂದು ಗುರುತಿಸಲಾಯಿತು. ನಿಪಿ-1 ಕ್ಕೆ ನನ್ನ ಜೊತೆ ಚಾಸಾ-3, 13, 14, 18

ಮತ್ತು ಕಿರಣ್‌ರವರು ಇದ್ದರು. ಪೋಲೀಸರು ಸ್ಥಳಕ್ಕೆ ಬಂದು ಸ್ಕೆಚ್ ನ್ನು ಮಾಡಿರುತ್ತಾರೆ. ನಂತರ ನಾನು ಪೋ. ಠಾಣೆಗೆ ಹೋಗಿ ನನ್ನ ಹೇಳಿಕೆಯನ್ನು ನೀಡಿರುತ್ತೇನೆ. ನನಗೆ ಟಾಟಾ ಸುಮೋ ವಾಹನದ ಸಂಖ್ಯೆ ನೆನಪಿಲ್ಲ.

**ಈ ಹಂತದಲ್ಲಿ ಮಾನ್ಯ ಸರ್ಕಾರಿ ಸಹಾಯಕ ಅಭಿಯೋಜಕರು ಸಾಕ್ಷಿಯನ್ನು ಭಾಗಶಃ ಪ್ರತಿಕೂಲ ಸಾಕ್ಷಿಯೆಂದು ಪರಿಗಣಿಸಿ, ಪಾಟೀ ಸವಾಲು ಮಾಡಲು ಅನುಮತಿ ಕೋರಿದ್ದು, ಮಾನ್ಯ ಸರ್ಕಾರಿ ಸಹಾಯಕ ಅಭಿಯೋಜಕರ ಮನವಿಯನ್ನು ಪುರಸ್ಕರಿಸಿ, ಪಾಟೀ ಸವಾಲು ಮಾಡಲು ಅನುಮತಿ ನೀಡಲಾಯಿತು.**

**ಪಾಟೀ ಸವಾಲು - ಮಾನ್ಯ ಸರ್ಕಾರಿ ಸಹಾಯಕ ಅಭಿಯೋಜಕ ರವರಿಂದ-**

ದಿ.07-10-2014 ರಂದು ನನ್ನ ಜನ್ಮ ದಿನವನ್ನು ನಾನು ಆಚರಿಸಿರುತ್ತೇನೆ.

ಈ ಹಂತದಲ್ಲಿ ಸಾಕ್ಷಿದಾರರ ಹೇಳಿಕೆಯನ್ನು ದೋಷಾರೋಪಣಾ ಪಟ್ಟಿಯ ಜೊತೆ ತನಿಖಾಧಿಕಾರಿಯು ಹಾಜರುಪಡಿಸಿಲ್ಲದ ಕಾರಣ ಪಾಟೀ ಸವಾಲನ್ನು ಮುಂದೂಡಲಾಯಿತು.

**ಓ. ಹೇ. ಕೇ. ಸ. ಇ. ಎ. ಒಪ್ಪಿರುತ್ತಾರೆ,**

**2 ನೇ ಅ. ನ್ಯಾ. ದಂ. ಮತ್ತು ಜೆಎಂಎಫ್‌ಸಿ, ಮಾಗಡಿ.**

**2 ನೇ ಅಪರ ನ್ಯಾಯಿಕ ದಂಡಾಧಿಕಾರಿ ಮತ್ತು ಜೆಎಂಎಫ್‌ಸಿ ನ್ಯಾಯಾಲಯ**
**ಮಾಗಡಿ**
**ಕ್ರಿಮಿನಲ್ ಪ್ರಕರಣ ಸಂಖ್ಯೆ 653/2019**
**ಚಾಸಾ- 03 / ಫ್ರಾಸಾ- 02**

| | |
|---|---|
| ಹೆಸರು | **ಅಕ್ಷಯ್** |
| ತಂದೆಯ ಹೆಸರು | **ಬಸವರಾಜು** |
| ವಯಸ್ಸು | **29** |
| ಉದ್ಯೋಗ | **ಖಾಸಗಿ ಕೆಲಸ** |
| ವಿಳಾಸ | **ಬೆಂಗಳೂರು** |

**ದಿನಾಂಕಃ 05-01-2024 ರಂದು ಸಾಕ್ಷಿಯನ್ನು ಕರೆಯಿಸಿ ಪ್ರಮಾಣ ವಚನ ಬೋಧಿಸಲಾಯಿತು.**

**ಮುಖ್ಯ ವಿಚಾರಣೆ- ಮಾನ್ಯ ಸರ್ಕಾರಿ ಸಹಾಯಕ ಅಭಿಯೋಜಕ ರವರಿಂದ-**

ಮೃತ ಇಂಫ್ಯಾಂಟ್ ಆಂಟೋನಿಯವರು ನನಗೆ ಗೊತ್ತು. 2014 ನೇ ಇಸವಿಯಲ್ಲಿ ಮಾಗಡಿರಸ್ತೆಯಲ್ಲಿ ಇರುವ ರೂಪೀಸ್ ಡಾಬಾಗೆ ಫ್ರಾಸಾ1 ರವರ ಬರ್ಡೇ ಪಾರ್ಟಿಗೋಸ್ಕರ ನನ್ನ ಸ್ಕೂಲ್ ಮತ್ತು ಕಾಲೇಜ್ ಸ್ನೇಹಿತರ ಜೊತೆ ಹೋಗಿರುತ್ತೇನೆ. ರಾತ್ರಿ ಮಳೆ ಬರುವ ಸಂಭವ ಇದ್ದ ಕಾರಣ ನಾವು ಆ ದಿನದಂದು ಡಾಬದಲ್ಲಿಯೇ ತಂಗಿದ್ದೇವು. ಮಾರನೇ ದಿನ ಬೆಳಗ್ಗೆ ವಾಪಸ್ಸು ಬರುವಾಗ ಮಾಗಡಿ ರಸ್ತೆಯಲ್ಲಿ ಇರುವ ಡ್ಯಾಮ್ ಹತ್ತಿರ ಆಂಟೋನಿಯವರು ಚಾಸಾ1 ರವರ ಜೊತೆ ಬೈಕಿನಲ್ಲಿ ಹೋಗುತ್ತಿದ್ದಾಗ, ಬೆಂಗಳೂರು ಕಡೆಯಿಂದ ಬರುತ್ತಿದ್ದ ಟಾಟಾಸುಮೋ ಬಂದು ಆಂಟೋನಿಯವರ ಬೈಕಿಗೆ ಡಿಕ್ಕಿಪಡಿಸಿರುತ್ತದೆ. ಸದರಿ ಅಪಘಾತದಿಂದ ಆಂಟೋನಿಯವರ ಕತ್ತು ಮತ್ತು ಕೈ ಕಾಲುಗಳಿಗೆ ಏಟಾಗಿರುತ್ತದೆ. ನಂತರ ಆಂಬುಲೆನ್ಸ್ ಮತ್ತು ಪೋ. ಠಾಣೆಗೆ ಕರೆಯನ್ನು ಮಾಡಿರುತ್ತೇವೆ. ಚಾಸಾ1 ರವರ ಕಾಲು ಮುರಿದು ಹೋಗಿರುತ್ತದೆ. ಆರೋಪಿಯನ್ನು ನೋಡಿದರೆ ನಾನು ಗುರುತಿಸುತ್ತೇನೆ. ಇಂದು ನ್ಯಾಯಾಲಯದ ಮುಂದೆ ಆರೋಪಿಯು ಇರುವುದಿಲ್ಲ. ಆರೋಪಿಯನ್ನು ಗುರುತಿಸುವ ವಿಷಯದಲ್ಲಿ ಆರೋಪಿಯ ಪರ ವಕೀಲರಿಂದ ಯಾವುದೇ ತಕರಾರು ಇರುವುದಿಲ್ಲ. ಪೋಲೀಸರು ಬಂದು ನಮ್ಮಿಂದ ಹೇಳಿಕೆ, ಹೆಸರು ಮತ್ತು ವಿಳಾಸವನ್ನು ಪಡೆದುಕೊಂಡರು. ಆದಾದ ನಂತರ ಏನಾಯಿತು ಎಂದು ನನಗೆ ಗೊತ್ತಿಲ್ಲ.

**ಈ ಹಂತದಲ್ಲಿ ಮಾನ್ಯ ಸರ್ಕಾರಿ ಸಹಾಯಕ ಅಭಿಯೋಜಕರು ಸಾಕ್ಷಿಯನ್ನು ಭಾಗಶಃ ಪ್ರತಿಕೂಲ ಸಾಕ್ಷಿಯೆಂದು ಪರಿಗಣಿಸಿ, ಪಾಟೀ ಸವಾಲು ಮಾಡಲು ಅನುಮತಿ ಕೋರಿದ್ದು, ಮಾನ್ಯ ಸರ್ಕಾರಿ ಸಹಾಯಕ ಅಭಿಯೋಜಕರ ಮನವಿಯನ್ನು ಪುರಸ್ಕರಿಸಿ, ಪಾಟೀ ಸವಾಲು ಮಾಡಲು ಅನುಮತಿ ನೀಡಲಾಯಿತು.**

**ಪಾಟೀ ಸವಾಲು - ಮಾನ್ಯ ಸರ್ಕಾರಿ ಸಹಾಯಕ ಅಭಿಯೋಜಕ ರವರಿಂದ-**

ದಿ.07-10-2014 ರಂದು ಫ್ರಾಸಾ-1 ರವರ ಜನ್ಮ ದಿನದ ಪ್ರಯುಕ್ತ ನನಗೂ ಮತ್ತು ಸ್ನೇಹಿತರಿಗೂ ಮಾಗಡಿಯ ಮುಖ್ಯ ರಸ್ತೆಯ ತಗಚಗುಪ್ಪೆ ಗ್ರಾಮದ ಬಳಿ ಇರುವ ರೂಪೀಸ್ ಡಾಬಗೆ ಕರೆದಿರುತ್ತಾರೆ ಎಂದರೆ ಸರಿ. ಅದರಂತೆ ನಾನು, ಚಾಸಾ-11 ರಿಂದ 14, ಚಾಸಾ-1 ಮತ್ತು ಇಂಫ್ಯಾಂಟ್ ಆಂಟೋನಿಯವರು ಹೋಗಿರುತ್ತೇವೆ ಎಂದರೆ ಸರಿ. ಮಾರನೇ ದಿನ 6.30 ರ ಸಮಯದಲ್ಲಿ ಬೆಂಗಳೂರಿಗೆ ವಾಪಸ್ಸು ಹೋಗುವಾಗ ಟೋನಿ ಮತ್ತು ಚಾಸಾ-1 ರವರು ದ್ವಿಚಕ್ರವಾಹನ ಸಂಖ್ಯೆ ಕೆಎ-01-ಇವೈ -80 ರಲ್ಲಿ ಹೋಗುತ್ತಿದ್ದರು ಎಂದರೆ ಸರಿ. ಸದರಿ ವಾಹನವನ್ನು ಟೋನಿಯವರು ಓಡಿಸುತ್ತಿದ್ದರು ಮತ್ತು ಚಾಸಾ-1 ರವರು ಹಿಂಭಾಗದ ಸವಾರನಾಗಿ ಕುಳಿತ್ತಿದ್ದರು ಎಂದರೆ ಸರಿ. ಆ ಸಮಯದಲ್ಲಿ ತಿಪ್ಪಗೊಂಡನಹಳ್ಳಿ ಡ್ಯಾಮ್ ಹತ್ತಿರ ಹೋಗುವಾಗ ಬೆಂಗಳೂರು ಕಡೆಯಿಂದ ಅತಿವೇಗ ಮತ್ತು ಅಜಾಗರೂಕತೆಯಿಂದ ಬರುತ್ತಿದ್ದ ಟಾಟಾ ಸುಮೋ ಸಂಖ್ಯೆ ಕೆಎ-02-ಎಎ-9337 ಬಂದು ಟೋನಿಯವರ ದ್ವಿಚಕ್ರವಾಹನಕ್ಕೆ ಡಿಕ್ಕಿಪಡಿಸಿತ್ತು ಎಂದರೆ ಸರಿ. ಸದರಿ ಅಪಘಾತದಿಂದ ಇಬ್ಬರೂ ಸಹ ಬೈಕ್ ಸಮೇತ ಕೆಳಗೆ ಬಿದ್ದಿರುತ್ತಾರೆ ಎಂದರೆ ಸರಿ. ಟೋನಿಯವರ ತಲೆಗೆ, ಕೆನ್ನೆಗೆ, ಮೈ ಕೈಗೆ ಮತ್ತು ಕಾಲುಗಳಿಗೆ ತೀವ್ರವಾದ ರಕ್ತಗಾಯವಾಗಿ ಸ್ಥಳದಲ್ಲಿಯೇ ಮೃತಪಟ್ಟರು ಎಂದರೆ ಸರಿ. ಚಾಸಾ-1 ರವರ ಬಲಗಾಲು, ತೊಡೆ, ಮೈ ಕೈಗೆ ,ಮುಖಕ್ಕೆ ಮತ್ತು ತಲೆಗೆ ರಕ್ತಗಾಯವಾಗಿತ್ತು ಎಂದರೆ ಸರಿ. ಚಾಸಾ-1 ರವರನ್ನು ಆಂಬುಲೆನ್ಸ್ ಮುಖಾಂತರ ಸುಂಕದಕಟ್ಟೆಯಲ್ಲಿ ಇರುವ ಲಕ್ಷ್ಮಿ ಆಸ್ಪತ್ರೆಗೆ ದಾಖಲಿಸಲಾಯಿತು ಎಂದರೆ ಸರಿ. ಚಾಸಾ-1 ರವರು ಟಾಟಾ ಸುಮೋ ಗಾಡಿಯು ಅತಿವೇಗ ಮತ್ತು ಅಜಾಗರೂಕತೆಯಿಂದ ಚಾಲನೆ ಮಾಡಿಕೊಂಡು ಬಂದು ಅವರಿಗೆ ಡಿಕ್ಕಿಪಡಿಸಿತ್ತು ಎಂದು ನನಗೆ ತಿಳಿಸಿದರು ಎಂದರೆ ಸರಿ. ಈ ವಿಚಾರಕ್ಕೆ ಸಂಬಂಧಿಸಿದಂತೆ ದಿ.08-10-2014 ರಂದು ನಾನು ಪೋಲೀಸರಿಗೆ ನನ್ನ ಹೇಳಿಕೆಯನ್ನು ನೀಡಿರುತ್ತೇನೆ ಎಂದರೆ ಸರಿ.

ಸದರಿ ಅಪಘಾತಕ್ಕೆ ಸಂಬಂಧಿಸಿದಂತೆ ದಿ.08-10-2014 ರಂದು ಬೆಳಗ್ಗೆ 11 ರಿಂದ 12 ಗಂಟೆಯವರೆಗೆ ಪೋಲೀಸರು ಅಪಘಾತ ನಡೆದ ಸ್ಥಳದಲ್ಲಿ ನಿಪಿ-1 ರಂತೆ ಪಂಚನಾಮೆಯನ್ನು ಮಾಡಿ ನನ್ನ ಸಹಿಯನ್ನು ಪಡೆದುಕೊಂಡರು ಎಂದರೆ ಸರಿ. ನನ್ನ ಜೊತೆ ಫ್ರಾಸಾ-1 ಮತ್ತು ಚಾಸಾ-4 ರವರು ನಿಪಿ-1 ಕ್ಕೆ ಸಹಿಯನ್ನು ಮಾಡಿರುತ್ತಾರೆ ಎಂದರೆ ಸರಿ. ಈಗ ನನಗೆ ನಿಪಿ-1 ನ್ನು ತೋರಿಸಿದ್ದು, ಅದರಲ್ಲಿ ನನ್ನ ಸಹಿ ಇದೆ. ಸಾಕ್ಷಿಯ ಸಹಿಯನ್ನು ನಿಪಿ-1(ಬಿ) ಎಂದು ಗುರುತಿಸಲಾಯಿತು. ಪಂಚನಾಮೆ ಮಾಡುವ ಸಮಯದಲ್ಲಿ ಪೋಲೀಸರು ಅಪಘಾತ ಮಾಡಿದ ಮತ್ತು ಅಪಘಾತಕ್ಕೆ ಒಳಗಾದ ವಾಹನಗಳನ್ನು ನನ್ನ ಸಮಕ್ಷಮದಲ್ಲಿ ಮುಂದಿನ ತನಿಖೆಗಾಗಿ ಅಮಾನತ್ತು ಪಡಿಸಿಕೊಂಡರು ಎಂದರೆ ಸರಿ. ಅಪಘಾತವು ನಡೆದು 10 ವರ್ಷಗಳ ಆದ ಕಾರಣದಿಂದ ಈ ಮೇಲೆ ಹೇಳಿದ ವಿಷಯವನ್ನು ನಾನು ಮರೆತಿರುತ್ತೇನೆ ಎಂದರೆ ಸರಿಯಲ್ಲ.

**ಪಾಟೀ ಸವಾಲು ಆರೋಪಿಯ ಪರ ಶ್ರೀ. ಎಂ.ಎಂ. ವಕೀಲರಿಂದಃ**

ಬೆಳಗ್ಗಿನ ಜಾವ 3 ಗಂಟೆಯ ತನಕ ನಾವುಗಳು ರೂಪೀಸ್ ಡಾಬದಲ್ಲಿ ಫ್ರಾಸಾ-1 ರವರ ಹುಟ್ಟು ಹಬ್ಬವನ್ನು ಆಚರಿಸಿರುತ್ತೇವೆ. ಫ್ರಾಸಾ-1 ರವರ ಬರ್ತ್ ಡೇ ಪಾರ್ಟಿಯ ಲ್ಲಿ ನಾನು ಮತ್ತು ಸ್ನೇ ಹಿತರು ಎಲ್ಲರೂ ಸಹ ಮದ್ಯ ಪಾನವನ್ನು ಸೇವನೆ ಮಾಡಿರುತ್ತೇವೆ. ಮಾರನೇ ದಿನ ಬೆಳಗ್ಗೆ ನಾವೆಲ್ಲರೂ 7 ರಿಂದ 7.30 ರ ಸಮಯದಲ್ಲಿ ಎದ್ದು ನಮ್ಮ ನಮ್ಮ ಊರುಗಳಿಗೆ ಹೊರಟಿರುತ್ತೇವೆ. ಮೊದಲು ನಾನು ಮತ್ತು ಫ್ರಾಸಾ-1 ರವರು ಒಂದು ಬೈಕಿನಲ್ಲಿ ಹೊರೆಟೆವು ಎಂದರೆ ಸರಿ. ನಾನು ಹೊರಟ ಒಂದು ಗಂಟೆಯ ನಂತರ ಮೃತ ಟೋನಿ ಮತ್ತು ಚಾಸಾ-1 ರವರು ಬೈಕಿನಲ್ಲಿ ಹೊರಟರು ಎಂದರೆ ಸರಿ. ನಾನು ಮತ್ತು ಫ್ರಾಸಾ-1 ರವರು ಬೆಂಗಳೂರಿಗೆ ತಲುಪಿದ ನಂತರ ನಮ್ಮ ಸ್ನೇಹಿತರು ನಮಗೆ ಕರೆಯನ್ನು ಮಾಡಿದರು ಎಂದರೆ ಆಗ ನಾವಿನ್ನೂ ಅಪಘಾತ ನಡೆದ ಸ್ಥಳದಲ್ಲಿ ಇದ್ದೇವು. ಅಪಘಾತವನ್ನು ನಾನು ಕಣ್ಣಾರೆ ನೋಡಿರುವುದಿಲ್ಲ ಮತ್ತು ಬೇರೆ ಯಾರೂ ಅಪಘಾತವನ್ನು ಕಣ್ಣಾರೆ ನೋಡಿದ್ದಾರೆ ಎಂದು ನನಗೆ ಗೊತ್ತಿಲ್ಲ. ನನಗೆ ಅಪಘಾತ ಬಗ್ಗೆ ಯಾರು ಮಾಹಿತಿಯನ್ನು ನೀಡಿರುವುದಿಲ್ಲ, ನಾವೇ ಮುಂದೆ ಹೋಗಿ ಅಪಘಾತ ಸ್ಥಳವನ್ನು ನೋಡಿ

ತಿಳಿದುಕೊಂಡಿರುತ್ತೇವೆ.

ನಮ್ಮಗಳ ಪೈಕಿ ಅಪಘಾತದ ಬಗ್ಗೆ ಪೋಲೀಸರು ಯಾರು ಮಾಹಿತಿಯನ್ನು ನೀಡಿದ್ದರು ಎಂದು ನನಗೆ ಗೊತ್ತಿಲ್ಲ. ಅಪಘಾತ ನಡೆದ ಸ್ಥಳದ ಬಳಿ ಸೇತುವೆಯನ್ನು ನಿರ್ಮಾಣ ಮಾಡುತ್ತಿದ್ದರು ಮತ್ತು ಅದು ತಿರುವಿನಿಂದ ಕೂಡಿರುತ್ತದೆ ಎಂದರೆ ಸರಿ. ಅಪಘಾತ ನಡೆದ ಸ್ಥಳದಲ್ಲಿ ಎಲ್ಲಾ ವಾಹನಗಳು ನಿಧಾನವಾಗಿ ಚಾಲನೆ ಮಾಡುತ್ತಿದ್ದವು ಎಂದರೆ ಸರಿ. ರೂಪೀಸ್ ಡಾಬದಿಂದ ಅಪಘಾತ ನಡೆದ ಸ್ಥಳಕ್ಕೆ ಎಷ್ಟು ಕಿ.ಮೀ. ನಷ್ಟು ಅಂತರವಿದೆ ಎಂದು ನನಗೆ ಗೊತ್ತಿಲ್ಲ. ಚಾಸಾ-1 ರವರ ಜೊತೆ ಆಂಬುಲೆನ್ಸ್ ನಲ್ಲಿ ನಾವು ಯಾರೂ ಹೋಗಿರುವುದಿಲ್ಲ, ಚಾಸಾ-1 ರವರು ಆಸ್ಪತ್ರೆ ಗೆ ತಲುಪಿದ ನಂತರ ನಾವುಗಳು ಆಸ್ಪತ್ರೆಗೆ ಹೋಗಿರುತ್ತೇವೆ. ಟೋನಿಯವರ ಮೃತ ದೇಹವನ್ನು ಎಲ್ಲಿಗೆ ಮತ್ತು ಯಾವ ವಾಹನದಿಂದ ವರ್ಗಾವಣೆ ಮಾಡಲಾಗಿರುತ್ತದೆ ಎಂದು ನನಗೆ ಗೊತ್ತಿಲ್ಲ.

ನಾನು ಅಪಘಾತವನ್ನು ಖುದ್ದಾಗಿ ನೋಡಿರುವುದಿಲ್ಲ ಮತ್ತು ನಾನು ಅಪಘಾತ ನಡೆದ ಸ್ಥಳಕ್ಕೆ ಹೋಗಿರುವುದಿಲ್ಲ, ನಾನು ಅಪಘಾತ ವಿಷಯ ತಿಳಿದ ತಕ್ಷಣ ಸುಂಕದಕಟ್ಟೆಯಲ್ಲಿರುವ ಲಕ್ಷ್ಮಿ ಆಸ್ಪತ್ರೆಗೆ ಹೋಗಿ ಅಪಘಾತದ ಬಗ್ಗೆ ತಿಳಿದುಕೊಂಡಿರುತ್ತೇನೆ ಎಂದರೆ ಸರಿ. ನಾನು ಆಸ್ಪತ್ರೆಯಲ್ಲಿ ಇದ್ದಾಗ ಪೋಲೀಸರು ಆಸ್ಪತ್ರೆಗೆ ಬಂದರು ಎಂದರೆ ಸರಿ. ಚಾಸಾ-1 ರವರು ನನ್ನ ಸ್ನೇಹಿತರು ಆದ ಕಾರಣದಿಂದ ಪೋಲೀಸರು ನನಗೆ ಆಸ್ಪತ್ರೆಯ ಬಳಿ ಖಾಲಿ ಪೇಪರ್ ಗಳಿಗೆ ಸಹಿ ಮಾಡಲು ಹೇಳಿದಾಗ ನಾನು ನನ್ನ ಸಹಿಯನ್ನು ಮಾಡಿರುತ್ತೇವೆ ಎಂದರೆ ಸರಿ. ನಂತರ ನಾನು ಮತ್ತು ನನ್ನ ಸ್ನೇಹಿತರು ನಮ್ಮ ನಮ್ಮ ಮನೆಗೆ ಹೊರಟು ಹೋದೆವು ಎಂದರೆ ಸರಿ. ನಂತರ ನಾನು ಅಪಘಾತ ನಡೆದ ಸ್ಥಳಕ್ಕೆ ಬಂದಿರುವುದಿಲ್ಲ.

ಪೋಲೀಸರು ನನಗೆ ಮಹಜರ್ ಮಾಡುವಾಗ ಹಾಜರಿರುವಂತೆ ಹೇಳಿ ಯಾವುದೇ ನೋಟಿಸ್ ನ್ನು ನೀಡಿರುವುದಿಲ್ಲ. ನಿಪಿ-1 ಕ್ಕೆ ನಾನು ಆಸ್ಪತ್ರೆಯಲ್ಲಿ ಸಹಿಯನ್ನು ಮಾಡಿರುತ್ತೇನೆ ಎಂದರೆ ಸರಿ. ನಿಪಿ-1 ರಲ್ಲಿ ಇರುವ ವಿಷಯದ ಬಗ್ಗೆ ನನಗೆ ಸಂಪೂರ್ಣವಾದ ಮಾಹಿತಿ ಇರುವುದಿಲ್ಲ ಎಂದರೆ ಸರಿ. ಚಾಸಾ-1 ಮತ್ತು ಮೃತ ಟೋನಿಯವರು ನನ್ನ ಸ್ನೇಹಿತರು ಆದ ಕಾರಣದಿಂದ ಅವರಿಗೆ ಸಹಾಯ ಮಾಡಬೇಕು ಎಂಬ ಉದ್ದೇಶದಿಂದ ನಾನು ಅಪಘಾತವನ್ನು ನೋಡದೇ ಇದ್ದರೂ ಮತ್ತು ಅಪಘಾತ ನಡೆದ ಸ್ಥಳಕ್ಕೆ ಹೋಗದೇ ಇದ್ದರೂ ಸಹ ಆರೋಪಿಯ ವಿರುದ್ಧ ಸುಳ್ಳು ಸಾಕ್ಷ್ಯ ಹೇಳುತ್ತಿದ್ದೇನೆ

ಎಂದರೆ ಸರಿಯಲ್ಲ.

**ಮರುವಿಚಾರಣೆ ಇಲ್ಲ.**

**ಓ. ಹೇ. ಕೇ. ಸ. ಇ. ಎ. ಓಪ್ಪಿರುತ್ತಾರೆ,**

**2 ನೇ ಅ. ನ್ಯಾ. ದಂ. ಮತ್ತು ಜೆಎಂಎಫ್‌ಸಿ, ಮಾಗಡಿ.**

**2 ನೇ ಅಪರ ನ್ಯಾಯಿಕ ದಂಡಾಧಿಕಾರಿ ಮತ್ತು ಜೆಎಂಎಫ್‌ಸಿ ನ್ಯಾಯಾಲಯ**

**ಮಾಗಡಿ**
**ಕ್ರಿಮಿನಲ್ ಪ್ರಕರಣ ಸಂಖ್ಯೆ ಃ**
**ಚಾಸಾ ಃ- 01 / ಪ್ರಾಸಾ ಃ- 01**

| | |
|---|---|
| ಹೆಸರು | |
| ತಂದೆಯ / ಗಂಡನ ಹೆಸರು | |
| ವಯಸ್ಸು | |
| ಉದ್ಯೋಗ | **ವ್ಯವಸಾಯ** |
| ವಿಳಾಸ | |

**ದಿನಾಂಕಃ 16-03-2023 ರಂದು** ಸಾಕ್ಷಿಯನ್ನು ಕರೆಯಿಸಿ ಪ್ರಮಾಣ ವಚನ ಬೋಧಿಸಲಾಯಿತು.

**ಮುಖ್ಯ ವಿಚಾರಣೆ** ಃ- **ಮಾನ್ಯ ಸರ್ಕಾರಿ ಸಹಾಯಕ ಅಭಿಯೋಜಕ ರವರಿಂದ** ಃ-

**ಈ ಹಂತದಲ್ಲಿ ಮಾನ್ಯ ಸರ್ಕಾರಿ ಸಹಾಯಕ ಅಭಿಯೋಜಕರು ಸಾಕ್ಷಿಯನ್ನು ಪ್ರತಿಕೂಲ ಸಾಕ್ಷಿಯೆಂದು ಪರಿಗಣಿಸಿ, ಪಾಟೀ ಸವಾಲು ಮಾಡಲು ಅನುಮತಿ ಕೋರಿದ್ದು, ಮಾನ್ಯ ಸರ್ಕಾರಿ ಸಹಾಯಕ ಅಭಿಯೋಜಕರ ಮನವಿಯನ್ನು ಪುರಸ್ಕರಿಸಿ, ಪಾಟೀ ಸವಾಲು ಮಾಡಲು ಅನುಮತಿ ನೀಡಲಾಯಿತು.**

**ಪಾಟೀ ಸವಾಲು ಃ- ಮಾನ್ಯ ಸರ್ಕಾರಿ ಸಹಾಯಕ ಅಭಿಯೋಜಕ ರವರಿಂದ ಃ-**

**ಪಾಟೀ ಸವಾಲು** ಃ- **ಆರೋಪಿ** ಪರ **ಶ್ರೀ. ,** ವಕೀಲರಿಂದ ಃ-

ಆರೋಪಿಗಳ ಪರವಾಗಿ ಏನು ಪಾಟೀ ಸವಾಲು ಇರುವುದಿಲ್ಲವೆಂದು ತಿಳಿಸಿರುತ್ತಾರೆ.

**ಮರು ವಿಚಾರಣೆ ಃ- ಇರುವುದಿಲ್ಲ.**

**ಓ. ಹೇ. ಕೇ. ಸ. ಇ. ಎ. ಒಪ್ಪಿರುತ್ತಾರೆ,**

**2 ನೇ ಅ. ನ್ಯಾ. ದಂ. ಮತ್ತು ಜೆಎಂಎಫ್‌ಸಿ,**

**ಮಾಗಡಿ.**